# ಬಿದರಗುಪ್ಪೆ ಗ್ರಾಮ ಪಂಚಾಯಿತಿ ಕಾರ್ಯಾಲಯ

ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ–562 107


ಕ್ರ.ಸಂ. ಬಿ.ಗ್ರಾ.ಪಂ.ಸಂಖ್ಯೆ:113/2023–24 ದಿನಾಂಕ :..........................................

ರವರಿಗೆ,

ಪರಿಸರ ಅಧಿಕಾರಿಗಳವರು,
ಪ್ರಾದೇಶಿಕ ಕಛೇರಿ ಬೆಂಗಳೂರು ದಕ್ಷಿಣ-2,
ನಿಸರ್ಗ ಭವನ, ಶಿವನಗರ,
ಬೆಂಗಳೂರು- 560079.

ಮಾನ್ಯರೇ

ವಿಷಯ: ವಸತಿ ಕಾಮಗಾರಿ ಯೋಜನೆಗಳಿಗೆ ನೀರು ಸರಬರಾಜು ಮಾಡುವ ಬಗ್ಗೆ.

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಬೆಂಗಳೂರು ನಗರ ಜಿಲ್ಲೆ, ಅನೇಕಲ್ ತಾಲ್ಲೂಕು, ಅತ್ತಿಬೆಲೆ ಹೋಬಳಿ, ಬಿದರಗುಪ್ಪೆಗ್ರಾಮ ಪಂಚಾಯಿತಿ ವ್ಯಾಪ್ತಿಯ ಜಿಗಳ ಗ್ರಾಮದ ಸರ್ವೆ ನಂ 41/1 ವಿಸ್ತೀರ್ಣ 01ಎಕರೆ 22 ಗುಂಟೆ, ಸರ್ವೆ ನಂ 42 ವಿಸ್ತೀರ್ಣ 03 ಎಕರೆ 33 ಗುಂಟೆ, ಸರ್ವೆ ನಂ 43/1 ವಿಸ್ತೀರ್ಣ 01 ಎಕರೆ 38 ಗುಂಟೆ ಮತ್ತು ಸರ್ವೆ ನಂ 43/2 ವಿಸ್ತೀರ್ಣ 03 ಎಕರೆ 10 ಗುಂಟೆ ಒಟ್ಟು ವಿಸ್ತೀರ್ಣ 10 ಎಕರೆ 21 ಗುಂಟೆ ಜಮೀನು ವಾಸದ ಉದ್ದೇಶಕ್ಕೆ ಪರಿವರ್ತನೆ ಮಾಡಿರುವ ಸದರಿ M/s. ಎನ್ ವಿ ಟಿ ಕ್ವಾಲಿಟಿ ಲೈಫ್ ಸ್ಟೈಲ್ ಎಸ್ಟೇಟ್ ಎಲ್ ಎಲ್ ಪಿ ರವರು ತಮ್ಮ ವಸತಿ ಯೋಜನೆಗೆ ನೀರು ಸರಬರಾಜು ಮಾಡಲು ಪಂಚಾಯಿತಿಯವರಿಗೆ ಕೋರಿರುವ ಮೇರೆಗೆ ಸದರಿಯವರಿಗೆ ನಿಯಮಾನುಸಾರ ವಸತಿ ಅಭಿವೃದ್ಧಿ ಯೋಜನೆ ನಕ್ಷೆಗೆ ಸಂಬಂಧಿಸಿದಂತೆ ಇವರು ನಿರ್ಮಿಸುವ ವಸತಿ ಬಡಾವಣೆಗೆ ಬೇಕಾಗಿರುವ ಅವಶ್ಯಕತೆ ನೀರನ್ನು ನಮ್ಮ ಪಂಚಾಯಿತಿ ವತಿಯಿಂದ ಪೂರೈಸಲು ಈ ಮೂಲಕ ಅನುಮತಿಯನ್ನು ಕೊಟ್ಟಿರುತ್ತೇವೆ. ಆದರೆ ಸದರಿಯವರು ಕೊರತೆಯನ್ನು ನೀಗಿಸಲು ನಮ್ಮ ಪಂಚಾಯಿತಿಗೆ ತಗಲುವ ವೆಚ್ಚಗಳಿಗೆ ಜವಾಬ್ದಾರರಾಗಿರುತ್ತಾರೆ.

**ಈ ಕೆಳಗಿನ ಷರತ್ತಿನೊಂದಿಗೆ ಈ NOC ನೀಡಲಾಗಿದೆ.**

ನಮ್ಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಕೊಳವೆ ಬಾವಿಗಳ ನೀರು ಉತ್ತಮವಾಗಿದ್ದು, ಗೃಹ ಬಳಕೆಗೆ ಯೋಗ್ಯವಾಗಿರುತ್ತದೆ.

ನಮ್ಮ ಪಂಚಾಯಿತಿ ವ್ಯಾಪ್ತಿಯಲ್ಲಿ ನೀರಿಗೆ ಸಂಬಂಧಪಟ್ಟಂತೆ ಈ ಕೆಳಕಂಡ ವಿವರಗಳಿರುತ್ತವೆ.

1. ಬಿದರಗುಪ್ಪೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 5 ಕಂದಾಯ ಗ್ರಾಮಗಳಿದ್ದು 2 ಮಜರಾ ಗ್ರಾಮಗಳಿರುತ್ತವೆ.
2. ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಒಟ್ಟು ಜನಸಂಖ್ಯೆ 9618 (2011 ರ ಜನಗಣತಿ ಪ್ರಕಾರ) ಇರುತ್ತದೆ.
3. ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಒಟ್ಟುಕೊಳವೆ ಬಾವಿಗಳ ಸಂಖ್ಯೆ – 18.
4. ಒಟ್ಟು ನೀರು ಶೇಖರಣಾ ಟ್ಯಾಂಕ್ ಗಳ ಸಂಖ್ಯೆ – 04
5. ನೀರು ಸರಬರಾಜು ವೇಳೆ ಬೆಳಗೆ 6 ರಿಂದ ರಾತ್ರಿ 1 ಘಂಟೆವರೆಗೆ (ವಿದ್ಯುತ್ ಸರಬರಾಜಿನ ಆಧಾರದ ಮೇಲೆ)
6. ಹೊಸ ವಸತಿ ಕಟ್ಟಡಗಳಿಗೆ ಅನುಮತಿ ಕೊಟ್ಟಿರುವ ನೀರಿನ ಪ್ರಮಾಣ 250 ಕೆಎಲ್ ( ವಿವರಗಳನ್ನ ಲಗತ್ತಿಸಿದೆ)

**ವಿಶೇಷ ಸೂಚನೆ**:- ಅನುಮೋದಿತ ಮತ್ತು ಅಭಿವೃದ್ಧಿಪಡಿಸಿದ ವಸತಿ ಬಡಾವಣೆಗಳನ್ನು ನಮ್ಮ ಪಂಚಾಯಿತಿಗೆ ವರ್ಗಾವಣೆಗೊಂಡ ನಂತರ ಗ್ರಾಮ ಪಂಚಾಯಿತಿ ಕಾನೂನಿನಡಿಯಲ್ಲಿ ನೀರು ಮತ್ತು ಇತರ ಸೌಲಭ್ಯಗಳನ್ನು ಒದಗಿಸಲಾಗುವುದು.

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಬಿದರಗುಪ್ಪೆ ಗ್ರಾಮ ಪಂಚಾಯಿತಿ
ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು
ಬೆಂಗಳೂರು ನಗರ ಜಿಲ್ಲೆ